ಶ್ರೀ ಎಸ್. ರಮೇಶ್:- ನಾನು ಮಂತ್ರಿಯಾದ ತಕ್ಷಣ ಮೊಟ್ಟಮೊದಲು 'ಹೂಂ' ಎಂದಿದ್ದು ಶ್ರೀಮಾನ್ ಗುರುದೇವ್‌ರವರ ಪ್ರಶ್ನೆಗೆ. ನೀವು ಜಾಗ ಕೊಡಿ, ನಾವು ಕ್ರೀಡಾಂಗಣ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಈಗ ಜಾಗ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಯಾವಾಗ ಜಾಗ ಕೊಡುತ್ತೀರೋ, ಆ ಕೂಡಲೇ ನಾವು ಕ್ರೀಡಾಂಗಣ ಕಟ್ಟಲು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಆರ್. ಗುರುದೇವ್:- ನನ್ನ ಕ್ಷೇತ್ರಕ್ಕೆ ಎರಡು ತಾಲ್ಲೂಕುಗಳು ಬರುತ್ತವೆ. ಸಕಲೇಶಪುರದಲ್ಲಿ ಈಗಾಗಲೇ ಮಾಡಿಕೊಟ್ಟಿದ್ದಾರೆ. ಆಲೂರು ತಾಲ್ಲೂಕಿಗೆ ಇನ್ನೊಂದು ಮಾಡಿಕೊಡುತ್ತೇವೆಂದು ಭರವಸೆ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಪ್ರಶ್ನೋತ್ತರ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಕೃಷ್ಣ ಜಲಾನಯನ ಏತ ನೀರಾವರಿ ನಿಗಮ.

೩೮೨ (೨೧೫೭) ಶ್ರೀ ಅಜಯ್ ಕುಮಾರ್ ಸರನಾಯಕ್ (ಬಾಗಲಕೋಟೆ):- ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ಯಾವಾಗ ಸ್ಥಾಪನೆಯಾಯಿತು?

ಆ) ಇಲ್ಲಿಯವರೆಗೆ ನಿಗಮದಿಂದ ವಿಜಾಪುರ ಜಿಲ್ಲೆಯಲ್ಲಿ ಮೋಜಣಿ ಕೈಗೊಂಡಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಇ) ನಿಗಮದಿಂದ ಕಾರ್ಯಗತ ಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಈ) ಬಾಗಲಕೋಟೆ ತಾಲ್ಲೂಕಿನಲ್ಲಿ ಯಾವುದಾದರೂ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆ ಇದೆಯೇ?

ಈ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ, ಈ ನಿಗಮವು ೧೯೮೬ರ ಜೂನ್ ೯ ರಂದು ಸ್ಥಾಪನೆಯಾಯಿತು ಹಾಗೂ ೧೯೮೭ರ ಮಾರ್ಚ್ ೩೦ರಂದು ಕಂಪನಿ ಕಾಯ್ದೆ ೧೯೫೬ರನ್ವಯ ಸರ್ಕಾರದ ಕಂಪನಿ ಎಂದು ನೊಂದಾಯಿಸಲಾಯಿತು.

ಆ) ವಿಜಾಪುರ ಜಿಲ್ಲೆಯಲ್ಲಿ ವಿವರವಾದ ತನಿಖೆಗಾಗಿ ಮೋಜಣಿ ಕೈಗೊಂಡ ಏತ ನೀರಾವರಿ ಯೋಜನೆಗಳ ಸಂಖ್ಯೆ ೭ ಮತ್ತು ಪ್ರಾಥಮಿಕ ತನಿಖೆಯ ಮೋಜಣಿ ಕೈಗೊಂಡ ಏತ ನೀರಾವರಿ ಯೋಜನೆಗಳ ಸಂಖ್ಯೆ ೯.

ಇ) ಕಾರ್ಯಗತಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ೨. ತಾಲ್ಲೂಕು ವಿವರ ಈ ರೀತಿ ಇದೆ.

ಯೋಜನೆಯ ಹೆಸರು	ಅಂದಾಜು ಲಕ್ಷ ರೂ. ಗಳಲ್ಲಿ	ಅಂದಾಜು ನೀರಾವರಿ ಕ್ಷೇತ್ರ ಹೆಕ್ಟೇರ್‌ಗಳಲ್ಲಿ
೧. ಬಾದಾಮಿ ತಾಲ್ಲೂಕು		
ಪಿತ ನೀರಾವರಿ ಯೋಜನೆ ಚಿಕ್ಕನಸಬಿ	೯೪.೭೮	೪೮೬
೨. ಜಮಖಂಡಿ ತಾಲ್ಲೂಕು		
ಪಿತ ನೀರಾವರಿ ಯೋಜನೆ ಆಡಿಹುಡಿ ತೊದಲಬಾಗಿ	೩೨೪.೮೫೪	೧೪೯೦

ಈ) ಹೌದು ಘಟ್ಟಿ ಬಳಿ ಪಿತ ನೀರಾವರಿ ಯೋಜನೆ.

ಉ) ೧೯೯೨-೯೩ರ ಸಾಲಿನಲ್ಲಿ ಕಾರ್ಯಗತ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಬಾಗೇಪಲ್ಲಿ ತಾಲ್ಲೂಕು ಚೇಳೂರು ಮಂಡಲ ದೊಡ್ಡ ಹಳ್ಳಿಯಲ್ಲಿ ನಿವೇಶನಗಳ ವಿತರಣೆ

೩೮೪ (೨೧೯೪) ಶ್ರೀ ಚೌಡರೆಡ್ಡಿ (ಚಿಂತಾಮಣಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬಾಗೇಪಲ್ಲಿ ತಾಲ್ಲೂಕು, ಚೇಳೂರು ಮಂಡಲ, ದೊಡ್ಡಿ ಹಳ್ಳಿ ಗ್ರಾಮದ ಸರ್ವೆ ನಂ. ೫೦ರ ಜಮೀನನ್ನು ಗ್ರಾಮದ ನಿವೇಶನ ರಹಿತ ಫಲಾನುಭವಿಗಳಿಗೆ ಹಂಚಲು ಸರ್ಕಾರದಿಂದ ಭೂ ಸ್ವಾಧೀನಪಡಿಸಿಕೊಳ್ಳಲಾಗುತ್ತೆ. ಹಾಗಿದ್ದಲ್ಲಿ ಭೂ ಸ್ವಾಧೀನಪಡಿಸಿಕೊಂಡ ತಾರೀಖಿನ್ನು ತಿಳಿಸಿ?

ಆ) ಭೂ ಸ್ವಾಧೀನಪಡಿಸಿಕೊಂಡ ಪ್ರದೇಶವನ್ನು ನಿವೇಶನಗಳಾಗಿ ವಿಂಗಡಿಸಿ ಎಷ್ಟು ಜನಕ್ಕೆ ಹಂಚಲಾಗಿದೆ? ಹಾಗೇ ಹಂಚಿಕೆ ಮಾಡಿದ ಫಲಾನುಭವಿಗಳ ಹೆಸರು ಮತ್ತು ಅಳತೆ ವಿವರವಾಗಿ ತಿಳಿಸುವುದು.

ಇ) ಮೇಲ್ಕಂಡ ಜಮೀನಿನಲ್ಲಿ ಸರ್ಕಾರದ ನಿವೇಶನಗಳನ್ನು ಹಂಚಿದ್ದರೂ ಸಹ ನಿವೇಶನಗಳ ಕಲ್ಲುಗಳನ್ನು ಕಿತ್ತು ಹಾಕಿ ಫಲಾನುಭವಿಗಳಿಗೆ ಹಿಂದಿನ ಮಾಲೀಕರು ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸದರಿ ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರವು ಯಾವ ರೀತಿಯ ರಕ್ಷಣೆಯನ್ನು ಕೊಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು. ೨೬-೧೧-೮೨.

ಆ) ನಿವೇಶನ ವಿಂಗಡಿಸಿ ೨೯ ಜನರಿಗೆ ೪೫ - ೫೦ ಅಡಿ ನಿವೇಶನ ಹಂಚಿರುತ್ತೆ. ನಿವೇಶನ ಪಡೆದವರ ಪಟ್ಟಿಯು ಕೆಳಗಿನಂತಿದೆ. ೧) ನಾರಾಯಣಪ್ಪ ಬಿನ್ ಮೈಲಾರಪ್ಪ, ೨) ಬೈಯಪ್ಪ ಬಿನ್